**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ- ಶ್ರೀಮತಿ ಸಿ ಬಿ ಎನ್ ವಕೀಲರಿಂದ ವಾದಿಯ ಪರವಾಗಿ**

2. ನಾನು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿರುತ್ತೇನೆ. 1992 ರಲ್ಲಿ ನನಗೆ ವಾರ್ತಾ ಇಲಾಖೆಯಲ್ಲಿ ಕೆಲಸ ಸಿಕ್ಕಿರುತ್ತದೆ. ನಾನು 3 ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತೇನೆ ಎಂದರೆ ಸರಿ. ಮೂಲ ಕರಿಯಪ್ಪ ಇವರಿಗೆ ಇಬ್ಬರು ತಂಗಿಯರು ಗಂಗಮ್ಮ ಹಾಗೂ ಕಮಲಮ್ಮ ಎಂದರೆ ಸರಿ. ಕರಿಯಪ್ಪನ ಮಗ ಕರಿಯಪ್ಪನ ಮೊದಲನೇ ಮಗಳನ್ನು ನಾನು ಮದುವೆಯಾಗಿರುತ್ತೇನೆ ಎಂದರೆ ಸರಿ. ನನಗೆ ಹಾಗೂ 3 ನೇ ಪ್ರತಿವಾದಿಗೆ ಮೂರು ಜನ ಮಕ್ಕಳು ಎಂದರೆ ಸರಿ. ನಮ್ಮ 2 ನೇ ಮಗಳು ನಾಗವೇಣಿಯನ್ನು ನನ್ನ ಹೆಂಡತಿ ತಮ್ಮ 2 ನೇ ಪ್ರತಿವಾದಿಯೊಂದಿಗೆ ಮದುವೆ ಮಾಡಿರುತ್ತೇವೆ ಎಂದರೆ ಸರಿ. ಕಮಲಮ್ಮ ರವರ ಮದುವೆ ರಾಮಪ್ಪಯವರ ಜೊತೆ ಆಗಿತ್ತು ಎಂದರೆ ಸರಿಯಲ್ಲ. ಕಮಲಮ್ಮ ತನ್ನ ಮದುವೆಯಾಗುವ ಪೂರ್ವದಲ್ಲಿ ಅಣ್ಣ ಕರಿಯಪ್ಪನ ಜೊತೆ ವಾಸಿಸುತ್ತಿದ್ದರು ಎಂದರೆ ಸರಿ. ನನ್ನ ಮದುವೆ 1979 ರಲ್ಲಿ ಆಗಿರುತ್ತದೆ.

3. ನನ್ನ ಮದುವೆಯಾಗುವ ಕಾಲಕ್ಕೆ ಕಮಲಮ್ಮ ಶಿವಮೊಗ್ಗದಲ್ಲಿ ಒಂದು ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದರು ಎಂದರೆ ಸರಿ. ಅವರು ಪ್ರತ್ಯೇಕವಾಗಿ ದುಡಿಮೆ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸರಿಯಲ್ಲ. ಕಮಲಮ್ಮ ಪೆಟ್ಟಿಗೆ ಇಟ್ಟುಕೊಂಡು ವಾಸ ಮಾಡುತ್ತಿದ್ದಾಗ ನಾನು ಕೆಲಸ ಸಿಕ್ಕ ಮೇಲೆ ಅವರ ಜೊತೆ ಶಿವಮೊಗ್ಗದಲ್ಲಿ ವಾಸಿಸುತ್ತಿದೆ ಎಂದರೆ ಸುಳ್ಳು. ಕಮಲಮ್ಮನ ಅಕ್ಕ ಗಂಗಮ್ಮ ರವರ ಮದುವೆ ಕೊಟ್ಯಪ್ಪರವರ ಜೊತೆ ಆಗಿರುತ್ತದೆ. ಗಂಗಮ್ಮ ಚೀಳಂಗಿಯಲ್ಲಿ ವಾಸಿಸುತ್ತಿದ್ದರು. ಗಂಗಮ್ಮ ಮತ್ತು ಕೊಟ್ಯಪ್ಪ ರವರ ಮಗನ ಹೆಸರು ನಿಂಗಪ್ಪ(6 ನೇ ಪ್ರತಿವಾದಿ) ಎಂದರೆ ಸರಿ. 6 ನೇ ಪ್ರತಿವಾದಿ ಶಿವವಮೊಗ್ಗದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಕಮಲಮ್ಮ ಹಾಗೂ ನಿಂಗಪ್ಪ ಅಕ್ಕ ಪಕ್ಕದ ಮನೆಗಳಲ್ಲಿ ವಾಸಿಸುತ್ತಿದ್ದರು ಎಂದರೆ ಸುಳ್ಳು. ಕಮಲಮ್ಮ ಮತ್ತು ರಾಮಪ್ಪರವರ ದಾಂಪತ್ಯದಿಂದ ವಾದಿ ಜನಿಸಿರುತ್ತಾಳೆ ಎಂದರೆ ಸುಳ್ಳು. ವಾದಿ 3-4 ವರ್ಷದವಳು ಇದ್ದಾಗ ಆಕೆಯ ರಾಮಪ್ಪ ಅವರನ್ನು ತೊರೆದು ಹೋಗಿರುತ್ತಾರೆ ಎಂದರೆ ಸುಳ್ಳು.

4. ಈಗ ನನಗೆ ತೋರಿಸುತ್ತಿರುವ ಫೋಟೋದಲ್ಲಿ ನನ್ನ ಮಗ, ಸೊಸೆ ಹಾಗೂ ಮಗಳು ಇರುತ್ತಾರೆ ಎಂದರೆ ಸರಿ. ಸದರಿ ಫೋಟೋವನ್ನು ನಿಪಿ-23 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಈಗ ನ್ಯಾಯಾಲಯದಲ್ಲಿ ಹಾಜರು ಇರುವ ವಾದಿ ಇರುತ್ತಾರೆ ಎಂದರೆ ಸುಳ್ಳು. ಈ ನನಗೆ ತೋರಿಸುತ್ತಿರುವ ಫೋಟೋದಲ್ಲಿ ನನ್ನ

ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಫೋಟೋವನ್ನು ನಿಪಿ-24 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಈಗ ನ್ಯಾಯಾಲಯದಲ್ಲಿ ಹಾಜರು ಇರುವ ವಾದಿ ಇರುತ್ತಾರೆ ಎಂದರೆ ಸುಳ್ಳು. ಈ ನನಗೆ ತೋರಿಸುತ್ತಿರುವ ಫೋಟೋದಲ್ಲಿ 6 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಇರುತ್ತಾರೆ ಎಂದರೆ ಸರಿ. ಸದರಿ ಫೋಟೋವನ್ನು ನಿಪಿ-25 ಎಂದು ಗುರುತಿಸಲಾಯಿತು. ನಿಪಿ-25 ವಾದಿಯ ಮಗಳ ಫೋಟೋ ಎಂದರೆ ಸುಳ್ಳು. ನಿಪಿ-25 ರಲ್ಲಿ ವಾದಿಯ ಮಗಳನ್ನು ಆಕೆಯ ಸೋದರ ಮಾವ 6 ನೇ ಪ್ರತಿವಾದಿ ಧಾರೆಗೆ ಕರೆದುಕೊಂಡು ಹೋಗುತ್ತಿದ್ದಾರೆ ಎಂದರೆ ಸುಳ್ಳು. ನನಗೆ ಎಲ್ಲಾ ಫೋಟೋಗಳ ಬಗ್ಗೆ ಹಾಗೂ ವಾದಿಯ ಬಗ್ಗೆ ಗೊತ್ತಿದ್ದರು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಭಾಗ ನೀಡಿದರೆ ನನ್ನ ಮಗಳ ಗಂಡ 2 ನೇ ಪ್ರತಿವಾದಿಗೆ ಕಡಿಮೆ ಆಸ್ತಿ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿ ಕಮಲಮ್ಮಳ ವಾರಸುದಾರಳಾದ ಕಾರಣ ಕುಟುಂಬದ ಎಲ್ಲಾ ಕಾರ್ಯಕ್ರಮಗಳಲ್ಲಿ ಆಕೆ ಭಾಗವಹಿಸಿರುತ್ತಾಳೆ ಆಗ ಫೋಟೋಗಳನ್ನು ತೆಗೆಯಲಾಗಿದೆ ಎಂದರೆ ಸುಳ್ಳು.ಕಮಲಮ್ಮ ಅವಿವಾಹಿತಳಾಗಿ ತೀರಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಮಲಮ್ಮ ನಮ್ಮ ಮನೆಯಲ್ಲಿ ಅನಾರೋಗ್ಯದಿಂದ ತೀರಿಕೊಂಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಮಲಮ್ಮ ಸ್ವತಂತ್ರವಾಗಿ ವಾಸಿಸುತ್ತಿದ್ದರು ಅವರು ತೀರಿಕೊಂಡ ಮೇಲೆ ವಾದಿ ಅವರ ಅಂತ್ಯ ಸಂಸ್ಕಾರವನ್ನು ಮಾಡಿರುತ್ತಾರೆ ಎಂದರೆ ಸುಳ್ಳು. ಕಮಲಮ್ಮರವರ ಕೈಲಾಸ ಸಮಾರಾಧನೆಯ ದಾಖಲೆಗಳು ಇರುವುದಿಲ್ಲ. ನಾನೇ ಅವರ ಅಂತ್ಯ ಸಂಸ್ಕಾರವನ್ನು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ